# KANNADA

***(Three hours)***

*(Candidates are allowed additional 15 minutes for only reading the paper.*
*They must NOT start writing during this time.)*

---------------------------------------------------------------------------------------------------------------

*Answer questions **1, 2** and **3** in **Section A** and **four** other questions from **Section B***
*on at **least three** of the prescribed textbooks.*
*The intended marks for questions or parts of the questions are given in brackets [ ].*

---

## SECTION A

### LANGUAGE - 50 Marks

**Question 1**

Write a composition in approximately 400 words in Kannada on any ONE of the topics given below: **[20]**

ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ಒಂದನ್ನು ಆರಿಸಿ 400 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ:

(i) ವಸಂತಕಾಲದಲ್ಲಿ ನೀವು ಮಾಡಿದ ಪ್ರವಾಸವನ್ನು ವರ್ಣಿಸುತ್ತಾ ಪ್ರಬಂಧ ಬರೆಯಿರಿ.

(ii) ಮಹಿಳೆಯರು ದೀರ್ಘಕಾಲ ನೌಕರಿ ಮಾಡುವುದರಿಂದ ಬದುಕು ನೀರಸವೆನಿಸಿ, ನೌಕರಿ ಮಾಡುವ ಸ್ಥಳಹಾಗೂ ಗೃಹ ಎರಡಕ್ಕೂ ನ್ಯಾಯ ಒದಗಿಸಲಾಗುವುದಿಲ್ಲ. – ಎಂಬ ವಿಚಾರದ ಬಗ್ಗೆ ನಿಮ್ಮ ಅಮೂಲ್ಯ ಸಲಹೆಗಳನ್ನೂ ಸೇರಿಸಿಪ್ರಬಂಧ ಬರೆಯಿರಿ.

(iii) ಇಂದು ಸಮಾಜದಲ್ಲಿರುವ ಅಶಿಕ್ಷಣವು ಅನೇಕ ಸಮಸ್ಯೆಗಳಿಗೆ ದಾರಿಯಾಗುತ್ತಿದೆ – ವಿವರಿಸಿ, ದೇಶದ ಉನ್ನತಿಗಾಗಿ ನಾವು ಅನುಸರಿಸಬೇಕಾದ ಸತ್ಯಗಳನ್ನು ತಿಳಿಸಿ.

(iv) ಮಾನವನ ಬದುಕಿನಲ್ಲಿ ಸಾಹಿತ್ಯ, ಸಂಗೀತವೇ ಮೊದಲಾದ ಕಲೆಗಳ ಅವಶ್ಯಕತೆ, ಅವುಗಳಿಂದ ಅವನು ಬದುಕಿನಲ್ಲಿ ಅನುಭವಿಸುವ  ಆನಂದದ ಬಗ್ಗೆ ಬರೆಯಿರಿ.

(v) 'ದೂರದರ್ಶನವಿಲ್ಲದ ಮನೆಗಳಿದ್ದರೆ ಅವು ಇರದಂತೆಯೇ ಸರಿ' – ಈ ಹೇಳಿಕೆಯ ಪರ ಅಥವಾ ವಿರೋಧವಾಗಿ ನಿಮ್ಮ ಅಭಿಪ್ರಾಯಗಳನ್ನು ವಿವರವಾಗಿ ಬರೆಯಿರಿ.

(vi) ಕೆಳಗೆ ನೀಡಲಾಗಿರುವ ಯಾವುದಾದರೊಂದು ವಿಷಯದ ಬಗ್ಗೆ ಒಂದು ಮೂಲ ಕಥೆ ಬರೆಯಿರಿ.

(a) 'ಪರಿಶ್ರಮದ ಫಲ ಸಿಹಿಯಾಗಿಯೇ ಇರುತ್ತದೆ'– ಈ ಹೇಳಿಕೆಯನ್ನು ಬಿಂಬಿಸುವ ಸ್ವಕಲ್ಪಿತ ಕತೆಯನ್ನು ಬರೆಯಿರಿ.

(b) .....ನಾನು ಅಲ್ಲಿಂದ ಬಿಡುಗಡೆಯಾದೆ ಎಂಬುದು ನಂಬಲಸಾಧ್ಯ! ಎಂದು ಮುಕ್ತಾಯವಾಗುವ ಕಥೆ ಬರೆಯಿರಿ.

.......................................................................................................................................

© *Copyright reserved.*

### Question 2

Read the passage given below carefully and answer in Kannada the questions that follow, using your own words. **[20]**

ಕೊಟ್ಟಿರುವ ಗದ್ಯಭಾಗವನ್ನು ಜೋಪಾನವಾಗಿ ಓದಿ, ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ, ನಿಮ್ಮ ಸ್ವಂತ ವಾಕ್ಯಗಳಲ್ಲಿ ಬರೆಯಿರಿ.

ವಿಶ್ವನಾಥದತ್ತ ಮತ್ತು ಭುವನೇಶ್ವರೀದೇವಿಯವರ ಪುತ್ರನಾಗಿ ಜನಿಸಿದ ನರೇಂದ್ರನ ಬಾಲ್ಯದಲ್ಲೇ ಅವನ ಭವಿಷ್ಯಜೀವನದ ಉಜ್ವಲತೆಯನ್ನು ಗುರುತಿಸಿದವರುಂಟು. ಅವರಲ್ಲಿ ನರೇಂದ್ರನ ಚಿಕ್ಕಪ್ಪ ಕಾಳೀಪ್ರಸಾದದತ್ತಕೂಡಾ ಒಬ್ಬರು. ಅವರು ಸಾಯುವ ಸ್ಥಿತಿಯಲ್ಲಿದ್ದಾಗ ಮಹಭಾರತದ ಶ್ಲೋಕಗಳನ್ನು ಕೇಳಲು ಬಯಸಿದರೆ, ಓದುವ ಧೈರ್ಯ, ಮನಸ್ಸು ಯಾರಿಗೂ ಇರಲಿಲ್ಲ. ಬಾಲಕ ನರೇಂದ್ರ ಸ್ಪಷ್ಟವಾಗಿ ಓದುತ್ತಾನೆ. 'ಬೆಳೆಯಗುಣ ಮೊಳಕೆಯಲ್ಲಿ' ಎಂಬ ಮಾತಿದೆ. ನಿಜಕ್ಕೂ ನರೇಂದ್ರನ ಬಾಲ್ಯವೆಂಬ ಮೊಳಕೆ ಅತ್ಯಂತ ದಷ್ಟಪುಷ್ಟವಾಗಿತ್ತು. ತೇಜಸ್ವಿಯಾದ ಮೈಕಾಂತಿ, ಹೊಳೆಯುವ ವಿಶಾಲ ನಯನ, ಅರಳುತ್ತಿರುವ ಪ್ರತಿಭೆಯನ್ನು ಸೂಸುವ ಮುಖಮುದ್ರೆ ಎಲ್ಲರ ಗಮನವನ್ನು ಸೆಳೆಯುತ್ತಿತ್ತು. ಮನದಲ್ಲಿ ನೂರಾರು ಉನ್ನತ–ಉದಾತ್ತ ಕಲ್ಪನೆಗಳು, ಹೃದಯದಲ್ಲಿ ಸದಾ ಜಿನುಗುವ ಪ್ರೇಮ, ಬುದ್ಧಿಯಲ್ಲಿ ಕತ್ತಿಯಲಗಿನ ಹರಿತ, ಸರಿಸಾಟಿಯಿಲ್ಲದ ಎದೆಗಾರಿಕೆ, ದಂಗುಬಡಿಯುವಂತಹ ಸಂಶೋಧನಾ ಪ್ರತಿಭೆ, ದಣಿವೆನ್ನದೆ ದುಡಿಯಬಲ್ಲ ದಕ್ಷತೆ, ಒತ್ತಿದಷ್ಟೂ ಪುಟಿಯುವಷ್ಟು ಉತ್ಸಾಹ ನರೇಂದ್ರನದು. ಬಾಲ್ಯದಿಂದಲೂ ಅವನಿಗೆ ಸರಿಸಮರಿಲ್ಲ.

ನರೇಂದ್ರನ ಬುದ್ಧಿಸಾಮರ್ಥ್ಯವನ್ನು ತೋರಿಸುವ ಒಂದು ಘಟನೆ. ಆ ದಿನಗಳಲ್ಲಿಬ್ರಿಟಿಷ್ ಸೈನ್ಯಾಧಿಕಾರಿಯೊಬ್ಬ ಕಲ್ಕತ್ತೆಗೆ ಬಂದಿದ್ದ. ಅವನು ತಂದಿದ್ದ ಯುದ್ಧದ ಹಡಗು ಬಂದರಿನಲ್ಲಿ ನಿಂತಿತ್ತು. ಅದನ್ನು ನೋಡಿಕೊಂಡು ಬರಬೇಕೆಂಬುದು ನರೇಂದ್ರನ ಗೆಳೆಯರ ಆಸೆ. ಬಂದರಿಗೆ ಹೋಗಲು ಅನುಮತಿಪತ್ರ ಬೇಕು. ಹುಡುಗರೆಲ್ಲಾ ನರೇಂದ್ರನನ್ನು ಒತ್ತಾಯಿಸಿದರು. ನರೇಂದ್ರ ಒಪ್ಪಿಕೊಂಡ. ಈ ಅನುಮತಿಪತ್ರವನ್ನು ಅಫ್ಷೀಸಿನಲ್ಲಿ ಬಡಾಸಾಹೇಬರನ್ನು ಕಂಡೇ ಪಡೆಯಬೇಕಾಗಿತ್ತು.ನರೇಂದ್ರ ಅರ್ಜಿಗಳೊಡನೆ ಆಫ್ಷೀಸಿಗೆ ಹೋದ. ಬಾಗಿಲಲ್ಲಿ ಭರ್ಜರಿ ಸಮವಸ್ತ್ರಧರಿಸಿದ್ದ ದ್ವಾರಪಾಲಕ, ನರೇಂದ್ರನನ್ನು ಕಂಡು "ಆ ಯುದ್ಧದ ಹಡಗಿನ ಹತ್ತಿರ ಹೋಗಲು ನೀನಿನ್ನೂ ಚಿಕ್ಕವನು, ನೀನು ಹೋಗಬಾರದೆಂದು ಗದರಿಸಿಬಿಟ್ಟನು. ನರೇಂದ್ರನಿಗೆ ನಿರಾಶೆಯಾಯಿತು. ಪಕ್ಕದಲ್ಲಿಯೇ ಬಡಾಸಾಹೇಬರ ಆಫ್ಷೀಸಿಗೆ ಹೋಗುವ ಮೆಟ್ಟಿಲನ್ನು ಕಂಡು ಅವನ ಮುಖ ಮಿಂಚಿತು. ಮೆಲ್ಲನೆ ದ್ವಾರಪಾಲಕನ ಕಣ್ಣು ತಪ್ಪಿಸಿ ಜನರ ಗುಂಪಿನಲ್ಲಿ ಸೇರಿ ಮೆಟ್ಟಿಲೇರಿದ. ಸಾಲಿನಲ್ಲಿ ನಿಂತ. ತನ್ನ ಸರದಿ ಬಂದಾಗ ಅರ್ಜಿಗಳನ್ನು ಸಾಹೇಬರ ಮುಂದಿಟ್ಟ, ಅವನ ಅದೃಷ್ಟ! ಬಡಾಸಾಹೇಬರು ರುಜು ಹಾಕಿಕೊಟ್ಟರು. ಹಿಂದಿರುಗುವಾಗ ದ್ವಾರಪಾಲಕನೆದುರು ಬಂದಾಗ ದ್ವಾರಪಾಲಕ ಆಶ್ಚರ್ಯಗೊಂಡ.

ನರೇಂದ್ರ ಆಟದಲ್ಲೂ ಮುಂದು, ಪಾಠದಲ್ಲೂ ಮುಂದು. ಅವನು ತನ್ನ ಪ್ರತಿದಿನದ ಪಾಠಗಳನ್ನು ಅತ್ಯಂತ ಉತ್ಸಾಹದಿಂದ ಅಭ್ಯಾಸ ಮಡುತ್ತಿದ್ದ. ಕೇವಲ ಒಂದು ಗಂಟೆಯಲ್ಲಿ ಪುಸ್ತಕದ ಪಾಠಗಳನ್ನು ಮಸ್ತಕಕ್ಕಿಳಿಸಿಬಿಡುತ್ತಿದ್ದ. ಆದ್ದರಿಂದಲೇ ಅಧ್ಯಯನದ ನಂತರ ಚೇಷ್ಟೆಗೆ, ತಮಾಷೆಗೆ ಸಮಯ ಮಿಗುತ್ತಿತ್ತು. ಅವನಿಗೆ ಇಂಗ್ಲೀಷ್, ಇತಿಹಾಸ, ಸಂಸ್ಕೃತಗಳಲ್ಲಿ ವಿಶೇಷ ಆಸಕ್ತಿ. ಲೆಕ್ಕವೆಂದರೆ ಆಸಕ್ತಿ ಕಡಿಮೆ, ನರೇಂದ್ರ ಉತ್ತಮ ಚಿತ್ರಕಾರ, ಅಲ್ಲದೆ ಮಧುರ ಗಾಯಕನೂ ಆಗಿದ್ದ.

ತನ್ನ ತರಗತಿಯ ಇತರ ಹುಡುಗರೊಂದಿಗೆ ತುಂಬಾ ಆತ್ಮೀಯವಾಗಿ ಬೆರೆಯುತ್ತಿದ್ದ ನರೇಂದ್ರ ಸಹಪಾಠಿಗಳಿಗೆ ಒಳ್ಳೊಳ್ಳೆ ಕಥೆಗಳನ್ನು ಹೇಳಿ ರಮಿಸುತ್ತಿದ್ದ, ಹಾಡುಗಳನ್ನು ಹೇಳಿ, ಸಂತೋಷಪಡಿಸುತ್ತಿದ್ದ. ತರತರದ ಅಣಕು ಚೇಷ್ಟೆಗಳನ್ನು ಮಾಡಿ ಹೊಟ್ಟೆ ಹುಣ್ಣಾಗುವಂತೆ ನಗಿಸುತ್ತಿದ್ದ, ಹುಡುಗರನ್ನು ಕೀಟಲೇ ಮಾಡಿ ರೇಗಿಸುತ್ತಿದ್ದ. ಆದರೆ ಯಾರ ಮನಸ್ಸಿಗೂ ನೋವುಂಟುಮಾಡುತ್ತಿರಲಿಲ್ಲ. ತನ್ನ ಸ್ವಭಾವದಿಂದ ಕೆಲವೇ ನಿಮಿಷಗಳಲ್ಲಿ ಗೆಳೆಯರನ್ನು ಗೆಲ್ಲುತ್ತಿದ್ದುದು ಮಾತ್ರವಲ್ಲದೆ, ಸನ್ನಿವೇಶಕ್ಕೆ ಸೂಕ್ತವಾಗಿ ಮಾತನಾಡುತ್ತಿದ್ದ ಚತುರನೂ ಆಗಿದ್ದ. ಅಪರಿಮಿತವಾದ ತೇಜಸ್ಸು, ಶಕ್ತಿ, ಬಲ ಅವನಲ್ಲಿ ಅಡಗಿಕೊಂಡಿತ್ತು.

© *Copyright reserved*.

ಬುದ್ಧಿವಂತ ಬಾಲಕ ತರಗತಿಯಲ್ಲಿ ಹೊಡೆಸಿಕೊಂಡದ್ದೂ ಉಂಟು. ಅವರು ಭೂಗೋಳ ಉಪಾಧ್ಯಾಯರು. ಒಮ್ಮೆ ತರಗತಿಯಲ್ಲಿ ಅವರು ಕೇಳಿದ ಪ್ರಶ್ನೆಯೊಂದಕ್ಕೆ ನರೇಂದ್ರ ಸರಿಯಾದ ಉತ್ತರವನ್ನೇ ಹೇಳಿದರೂ ಅದು ಸರಿಯಾದ ಉತ್ತರವಲ್ಲವೆಂದು ಹೇಳಿದಾಗ, ಅವನು ತನ್ನ ಉತ್ತರ ಸರಿಯೆಂದು ವಾದಮಾಡಿದ. "ಉತ್ತರ ತಪ್ಪಾಗಿ ಹೇಳಿದ್ದೂ ಅಲ್ಲದೆ ,ಅದೇ ಸರಿಯೆಂದು ಮೊಂಡಾಟ ಮಾಡುತ್ತೀಯಾ" ಎಂದು ತಮ್ಮ ನೀಳವಾದ ಬೆತ್ತದಿಂದ ಎಳೆಯ ಅಂಗೈಗೆ ರಪರಪನೆ ಬಾರಿಸಿದರು. ಪಾಪ ಹೇಗೆ ನೋವು ತಡೆದುಕೊಂಡನೋ ಅವನಿಗೇ ಗೊತ್ತು. ಉಪಾಧ್ಯಾಯರು ಪಾಠ ಮುಂದುವರಿಸಿದರು. ಕೆಲವೇ ನಿಮಿಷಗಳಲ್ಲಿ ನರೇಂದ್ರ ನೀಡಿದ ಉತ್ತರ ಸರಿಯೆಂಬುದು ಉಪಾಧ್ಯಾಯರಿಗೆ ಹೊಳೆಯಿತು. ತಕ್ಷಣ ಅವನ ಬಳಿ ಬಂದು ಕ್ಷಮೆ ಕೇಳೀದರು. ಅಂದಿನಿಂದ ನರೇಂದ್ರನನ್ನು ತುಂಬಾ ಗೌರವದಿಂದ ನೋಡಿಕೊಂಡಾರು.

ನರೇಂದ್ರನಲ್ಲಿ ಬಾಲ್ಯದಿಂದಲೇ ತನಗೆ ಸೂಕ್ತವೆಂದು ಕಂಡಾದ್ದನ್ನೇ ಮಾಡುತ್ತಿದ್ದ, ಸತ್ಯವನೇ ಹೇಳುತ್ತಿದ್ದ. ಕಷ್ಟಗಳಿಂದ ತಪ್ಪಿಸಿಕೊಳ್ಳುವುದಕ್ಕೇ ಆಗಲಿ, ಅಪ್ರಿಯ ಸನ್ನಿವೇಶಗಳಿಂದ ಪಾರಾಗುವುದಕ್ಕೇ ಆಗಲಿ ಸುಳ್ಳಿನ ಕಂತೆಯನ್ನು ಹೆಣೆಯುವ ದುರ್ಗುಣ ಅವನಲ್ಲಿರಲಿಲ್ಲ.

**ಪ್ರಶ್ನೆಗಳು:**

(i) ನರೇಂದ್ರ ಯಾರು ಅವನ ಬಾಲ್ಯದಬಗ್ಗೆ ಬರೆಯಿರಿ.

(ii) ಬಂದರಿನಲ್ಲಿದ್ದ ಯುದ್ಧದ ಹಡಗನ್ನು ನೋಡಲು ಬೇಕಾದ ಅಧಿಕಾರಿಯ ಅನುಮತಿಯನ್ನು ನರೇಂದ್ರನು ಪಡೆದುದರ ಸ್ವಾರಸ್ಯವನ್ನು ತಿಳಿಸಿ.

(iii) ವಿದ್ಯಾಭ್ಯಾಸದಲ್ಲಿ ನರೇಂದ್ರನಿಗಿದ್ದ ಅಭಿರುಚಿ ಹಾಗೂ ಶ್ರದ್ಧೆಯ ಬಗ್ಗೆ ಬರೆಯಿರಿ.

(iv) ಸಹಪಾಠಿಗಳೊಡನೆ ನರೇಂದ್ರ ಸ್ಪಂದಿಸುತ್ತಿದ್ದ ರೀತಿಯಲ್ಲಿ ಯಾವ ವಿಶೇಷತೆಗಳನ್ನು ಕಾಣಬಹುದು?

(v) ನರೇಂದ್ರನಿಗೆ ಉಪಾಧ್ಯಾಯರು ಹೊಡೆದದ್ದೇಕೆ? ಮತ್ತೆ ಅವರೇ ನರೇಂದ್ರನನ್ನು ಕ್ಷಮೆ ಬೇಡಿದ್ದೇಕೆ? ವಿವರಿಸಿ.

## Question 3

Answer the following as instructed :

**ಸೂಚನೆಗನುಗುಣವಾಗಿ ಬರೆಯಿರಿ:**

(i) Use the following words in sentences of your own, to illustrate their meanings: **[5]**

ಕೊಟ್ಟಿರುವ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಪ್ರಯೋಗಿಸಿ:

ಮಂದಹಾಸ, ಯಾತನೆ, ಬಕಬಂಧನ, ಪರಿವರ್ತನೆ, ಕ್ಷಮಾಶೀಲೆ

(ii) Correct the following sentences and rewrite: **[5]**

ಕೆಳಗಿನ ವಾಕ್ಯಗಳನ್ನು ಸರಿಪಡಿಸಿ ಬರೆಯಿರಿ:

(a) ಚನ್ನೈನಲ್ಲಿ ಬಂದ ಪ್ರವಾಹವು, ಅಲ್ಲಿನ ಮನೆಯನ್ನು ಮುಳುಗಿಸಿತು.

(b) ಜಪಾನಿನಲ್ಲಿ ಉಂಟಾದ ನೆರೆಯ ಹಾವಳಿಗೆ ಹೆದರಿ, ಜನರು ಸುರಕ್ಷಿತ ಪ್ರದೇಶಗಳಿಂದ ವಲಸೆ ಹೋಗುತ್ತಿದ್ದಾರೆ.

(c) ಕೋತಿಗಳು ಮರದಿಂದ ಹತ್ತುತ್ತಿತ್ತು.

(d) 'ತಾಯಿಯಂತೆ ಸೀರೆ, ನೂಲಿನಂತೆ ಮಕ್ಕಳು'– ಎಂಬುದೊಂದು ಗಾದೆ.

(e) ಕೃಷ್ಣದೇವರಾಯನು, ತೆನಾಲಿರಾಮನಿಗೆ 'ಮುಖ ನಿನ್ನ ಇಲ್ಲಿಂದ ಕಾಲುಕೀಳು ತೋರಿಸಬೇಡ' ಎಂದನು.

© *Copyright reserved.*

# SECTION B

## PRESCRIBED TEXT BOOKS - 50 MARKS

*Answer **four** questions from this Section on at least **three** of the prescribed textbooks.*

### ಕನ್ನಡ ಕಿರಣ (Kannada Kirana)

**Question 4**

ಬಾಗಿಲಲ್ಲಿ ಮುದುಕರೊಬ್ಬರು ನಿಂತಿದ್ದರು. ನಿಂತು ಎಲ್ಲವನ್ನೂ ಸರ್ವಸ್ವ ಅಧಿಕಾರವುಳ್ಳವರಂತೆ, ಒಂದು ಕಡೆಯಿಂದ ನೋಡುತ್ತಿದ್ದರು. ಮೇಜಿನ ಹತ್ತಿರ ನಿಂತಿದ್ದ ನಮ್ಮ ಮೇಷ್ಟ್ರನ್ನು "ನೀವು ಇಲ್ಲಿ ಮೇಷ್ಟ್ರೇನಯ್ಯ" ಎಂದು ಕೇಳಿದರು.

(i) ಬಾಗಿಲಲ್ಲಿ ನಿಂತಿದ್ದ ಮುದುಕರು ಯಾರು? ಅವರು ಬಂದಿದ್ದರ ಕಾರಣವೇನು? **[1½]**

(ii) 'ಅವಳೇ ಚೆನ್ನಾಗಿ ಓದಲಿ ಮೇಷ್ಟ್ರೇ, ನನಗೇನು ಮೆಳ್ಳಗಣ್ಣೇ?' ಈ ಮಾತುಗಳು ಯಾರವು? ಯಾರಬಗ್ಗೆ ಹೇಳಿದ್ದು? ಆ ಇಬ್ಬರು ವಿದ್ಯಾರ್ಥಿನಿಯರ ಬಗ್ಗೆ ಬರೆಯಿರಿ. **[3]**

(iii) ಮೇಷ್ಟ್ರು ತರಗತಿಯಲ್ಲಿದ್ದಾಗ ಇದ್ದಕ್ಕಿದ್ದಂತೆ ನುಗ್ಗಿದ ಹೆಂಗಸು ಯಾರು? ಏಕೆ ಬಂದಿದ್ದರು? ಆಗ ನಡೆದದ್ದೇನು? **[3]**

(iv) ಇನ್ಸ್ಪೆಕ್ಟರ್ ಬರುವಾಗ್ಗೆ ಶಾಲೆಯಲ್ಲಿ ಏನು ನಡೆಯುತ್ತಿತ್ತು? ಇನ್ಸ್ಪೆಕ್ಷನ್ ನಡೆದ ರೀತಿಯನ್ನು ವಿವರಿಸಿ. **[5]**

**Question 5** **[12½]**

ನೀರಿಗೆಂದು ಹೋಗಿದ್ದ ಶಾಸ್ತ್ರಿಗಳ ಸೊಸೆ ಆತ್ಮಹತ್ಯೆ ಮಾಡಿಕೊಳ್ಳುವ ನಿರ್ಧಾರಕ್ಕೆ ಬರಲು ಕಾರಣಗಳೇನು? ಅವಳ ನಿರ್ಧಾರವನ್ನು ಬದಲಾಯಿಸಿದ ಕರೆ ಯಾವುದು? ಮುಂದೆ ನಡೆದದ್ದೇನು? 'ಕರುಳಿನ ಕರೆ' ಕಥೆಯ ಹಿನ್ನೆಲೆಯಲ್ಲಿ ವಿವರಿಸಿ.

**Question 6** **[12½]**

ಸ್ವಾಮೀಜಿಯವರು ತಮ್ಮ ಧ್ಯಾನಕ್ಕೆ ಆಯ್ದುಕೊಂಡ ಸ್ಥಳ ಯಾವುದು? ಅಲ್ಲಿಗೆ ತಲುಪಿದ ರೀತಿ, ಗಾಢ ಧ್ಯಾನದಲ್ಲಿ ಅವರು ಕಂಡ ದರ್ಶನದ ಬಗ್ಗೆ ವಿವರಿಸಿ ಬರೆಯಿರಿ.

### ಕಾವ್ಯಸುಧೆ (Kavya Sudhe)

**Question 7**

'ಹಲ್ಲಣವ ಹೊತ್ತುಕೊಂಡು ಬಳಲುತ್ತೈದಾರೆ, ಗುಹೇಶ್ವರನೆಂಬ ಲಿಂಗವನವರೆತ್ತ ಬಲ್ಲರೋ'

(i) ಮೇಲಿನ ಮಾತುಗಳ ಅರ್ಥ ಬರೆಯಿರಿ. **[1½]**

(ii) ಮೂರುಲೋಕದ ಜನರು ಬಳಲುತ್ತಿರುವುದಕ್ಕೆ ಕಾರಣವೇನೆಂಬುದನ್ನು ವಚನಕಾರರು ಹೇಗೆ ತಿಳಿಸಿದ್ದಾರೆ? **[3]**

(iii) ಯಾರನ್ನು ಗುಹೇಶ್ವರ ಮೆಚ್ಚನೆಂದು ವಚನಕಾರರು ಹೇಳಿದ್ದಾರೆ? ಅದಕ್ಕೆ ಅವರು ನೀಡಿರುವ ಉದಾಹರಣೆಗಳನ್ನು ತಿಳಿಸಿ. **[3]**

(iv) 'ಗುಹೇಶ್ವರ' ಎಂಬುದು ಯಾರ ಅಂಕಿತ? ವಚನಕಾರರು ಎರಡೂ ವಚನಗಳಲ್ಲಿ ಹೇಳಿರುವ ವಿಚಾರಗಳನ್ನು ನಿಮ್ಮ ವಾಕ್ಯಗಳಲ್ಲಿ ಬರೆಯಿರಿ **[5]**

**Question 8** **[12½]**

ಪುರಂದರದಾಸರು 'ಉದರವೈರಾಗ್ಯ' ಕೀರ್ತನೆಯಲ್ಲಿ ಮನುಷ್ಯನು ಹೊಟ್ಟೆಪಾಡಿಗಾಗಿ ಯಾವ ಯಾವ ರೀತಿಯ ನಾಟಕಗಳನ್ನುಮಾಡುತ್ತಾನೆಂದು ತಿಳಿಸಿದ್ದಾರೆ? ವಿವರಿಸಿ.

**Question 9** **[12½]**

'ಅವ್ವ' ಬದುಕಿದ್ದು ಯಾರ್ಯಾರ ಹಾಗಲ್ಲ ಎಂದು ಕವಿ ಹೇಳಿದ್ದಾರೆ? ಮತ್ತು ಆಕೆ ಬದುಕಿನಲ್ಲಿ ಗುದ್ದಾಡಿದ್ದು ಯಾಕಾಗಿ ಎಂದು ತಿಳಿಸಿದ್ದಾರೆ? ಅಲ್ಲದೆ ಮನೆತನದ ಬಗ್ಗೆ ಅವ್ವನ ಕಾಳಜಿಯನ್ನು ಹೇಗೆ ಚಿತ್ರಿಸಿದ್ದಾರೆ? ವಿವರಿಸಿ.

© *Copyright reserved.*

## ಪ್ರೇಮ ಭಿಕ್ಷು (Prema Bhikshu)

### Question 10

ಅವನು ಎಲ್ಲಿಹುಟ್ಟಿದನೋ, ಎಲ್ಲಿ ಬೆಳೆದನೋ ಯಾರಿಗೂ ಗೊತ್ತಿರುವಂತೆ ಕಾಣೆ. ಇನ್ನು ಅವನ ತಂದೆ ತಾಯಿಯರ ವಿಷಯವೂ ಅಷ್ಟೇ...

(i) ಮೇಲೆ ಹೇಳಿರುವ ‘ಅವನು’ ಯಾರು? ಅವನೆಂದರೆ ಜನರಿಗೇಕೆ ಭಯ? [1½]

(ii) ದೀರ್ಘಾಯು ಯಾರು? ಅವನ ತಂದೆಯ ಅಂತಿಮ ಸಂದೇಶವೇನು? ಅದು ಅವನಿಗೆ ಹೇಗೆ ಉಪಯೋಗವಾಯಿತು? [3]

(iii) ಜನರ ಜೊತೆ ವರ್ತಿಸುವ ಕಲೆ ಬುದ್ಧಭಗವಾನನಿಗೆ ಸಿದ್ಧಿಸಿತ್ತು ಎಂಬುದಕ್ಕೆ ಒಂದೆರಡು ಉದಾಹರಣೆಯನ್ನು ತಿಳಿಸಿ. [3]

(iv) ಭಾರದ್ವಾಜನ ಕ್ರೂರ ವರ್ತನೆಯನ್ನೂ, ಬುದ್ಧನು ಅವನನ್ನು ಮೃದುಗೊಳಿಸಿದ ರೀತಿಯನ್ನು ತಿಳಿಸಿ. [5]

### Question 11 [12½]

ವೈದೇಹಿಕೆಯ ಗುಣಪರೀಕ್ಷೆಯ ಕತೆಯ ಸ್ವಾರಸ್ಯವನ್ನು ವರ್ಣಿಸಿ.

### Question 12 [12½]

ಅಂಗುಲಿಮಾಲನ ಸ್ವರೂಪ, ವಾಸಸ್ಥಾನ, ಗರ್ವ ದರ್ಪಗಳ ಉನ್ಮಾದ ಸ್ವಭಾವಗಳನ್ನು ವರ್ಣಿಸಿ ಬರೆಯಿರಿ.

## ಹೆಬ್ಬೆರಳು (Hebberalu)

### Question 13

‘ಎಲೆ ಮರುಳೆ, ಮೊದಲೆ ಆರ್ಯಂ, ಮೇಲೆ ಪಾರ್ವನಾತಂ, ನಮಗೆ ಕರಿಯ ಭಿಲ್ಲರನಾರ್ಯರಿಗೆ ವಿದ್ಯೆ ಹೇಳುವನೇ?

(i) ಮೇಲಿನ ಮಾತುಗಳು ಯಾರವು? ಅವುಗಳ ಅರ್ಥ ತಿಳಿಸಿ. [1½]

(ii) ಹಿರಣ್ಯಧನು, ಏಕಲವ್ಯನನ್ನು ದ್ರೋಣರ ಬಳಿಗೆ ಹೋಗದಂತೆ ತಡೆಯಲು ಹೇಳಿದ ಬುದ್ಧಿವಾದವೇನು? [3]

(iii) ಗೊಂದಲದವರು ಹೇಳುವ ಮೂರು ವಿಧದ ನರರ ಬಗ್ಗೆ ತಿಳಿಸಿ. [3]

(iv) ಗೊಂದಲದವರು ಮತ್ತು ಹಿರಣ್ಯಧನು, ಏಕಲವ್ಯನನ್ನು ಹರಸಿ ಕಳಿಸಿದ್ದು ಹೇಗೆ? ವಿವರಿಸಿ. [5]

### Question 14 [12½]

ಗುರುದ್ರೋಣರು ಅರ್ಜುನನು ಎಲ್ಲರಿಗಿಂತ ಮೇಲು ಎಂದು ಹೇಳಿದ್ದೇಕೆ?

ದ್ರೋಣರು ಏಕಲವ್ಯನಿಗೆ ವಿದ್ಯೆ ಹೇಳಿಕೊಡಲು ಸಾಧ್ಯವಿಲ್ಲವೆನ್ನಲು ನೀಡುವ ಕಾರಣಗಳೇನು? ವಿವರಿಸಿ.

### Question 15 [12½]

ಹಿರಣ್ಯಧನು ಯಾರು? ವಿದ್ಯೆ ಕಲಿತ ಏಕಲವ್ಯನು ಗುರುವಿಗೆ ಕಾಣಿಕೆ ಕೊಡುವೆನೆಂದಾಗ, ಹಿರಣ್ಯಧನುವಿನ ಮನಸ್ಸಿನಲ್ಲಾದ ಹೋರಾಟ, ಏಕಲವ್ಯನು ದ್ರೋಣರ ಬಳಿ ಹೋಗುವುದನ್ನು ತಪ್ಪಿಸಲು ಅವನು ನಡೆಸುವ ಪ್ರಯತ್ನಗಳ ಬಗ್ಗೆ ಬರೆಯಿರಿ.

© *Copyright reserved*.